# ಸುದ್ದಿ ಸಂಚಯ

## ಗುಜರಾತ್ ಭೂಕಂಪ ಪರಿಹಾರ ಕಾರ್ಯ

೨೦೦೧, ಜನವರಿ ೨೬ರಂದು ಗುಜರಾತಿನಲ್ಲಿ ಸಂಭವಿಸಿದ ಭಯಂಕರ ಭೂಕಂಪದ ಪರಿಣಾಮವಾಗಿ ಸಾವಿರಾರು ಜನರು ಅಸು ನೀಗಿದುದು, ಲಕ್ಷಾಂತರ ಜನರು ಮನೆ ಆಸ್ತಿ ಕಳೆದುಕೊಂಡದ್ದು ಎಲ್ಲರಿಗೂ ತಿಳಿದ ವಿಷಯ. ರಾಮಕೃಷ್ಣ ಮಿಷನ್ ಕೂಡಲೆ ಕಾರ್ಯ ನಿರತವಾಗಿ ಪ್ರಾಥಮಿಕ ಪರಿಹಾರವನ್ನು ನೀಡುವುದರೊಂದಿಗೆ ಪುನರ್ವಸತಿ ಕಾರ್ಯವನ್ನೂ ಪ್ರಾರಂಭಿಸಿತು. ಸುಮಾರು ಮೂರು ಕೋಟಿ ರೂಪಾಯಿಯ ಆಹಾರ ಪದಾರ್ಥ, ಬಟ್ಟೆ, ಔಷಧಿ ಮುಂತಾದವುಗಳನ್ನು ಒದಗಿಸಲಾಗಿದೆ. " ಯಾವ ಅಧಿಕಾರಿಗಳೂ ನಮ್ಮಲ್ಲಿಗೆ ಬರಲಿಲ್ಲ. ಆದರೆ ರಾಮಕೃಷ್ಣ ಮಿಷನ್ನಿನವರು ಬಂದು ಬಿಡಾರ ಹೂಡಿದರು. ನಾವು ಒಂದು ಕಪ್ಪು ಟೀಗೂ ಸಾಲು ನಿಲ್ಲಬೇಕಾಗಿತ್ತು. ಆದರೆ ಆ ಟೀ ತುಂಬ ರುಚಿಯಾಗಿತ್ತು " — ಎನ್ನುತ್ತಾನೆ ಹಳ್ಳಿಯವನೊಬ್ಬ. ಕಛ್‌ನಲ್ಲಿ ವಾಸಿಸುವ ದಾನಿಯೊಬ್ಬರಾದ ಡಾ. ಸುಮನ್ ಥಕ್ಕರ್ ಎಂಬುವವರು ಹೇಳುತ್ತಾರೆ : "ರಾಮಕೃಷ್ಣ ಮಿಷನ್ನಿನವರೇ ಪ್ರಪ್ರಥಮವಾಗಿ ಅಲ್ಲಿಗೆ ಬಂದು ಪರಿಹಾರ ಕಾರ್ಯ ಪ್ರಾರಂಭಿಸಿದವರು" ಅವರು ಹತ್ತುಸಾವಿರ ಡಾಲರ್ ನೀಡಿ ಅದನ್ನು ಕಛ್ ಪ್ರದೇಶದಲ್ಲಿ ಪುನರ್ವಸತಿ ಕಾರ್ಯಕ್ಕೆ ಉಪಯೋಗಿಸಬೇಕೆಂದು ಬಯಸಿದರು.

ಕಛ್, ಪೋರ್‌ಬಂದರ್, ರಾಜಕೋಟ್ ಮತ್ತು ಸುರೇಂದ್ರ ನಗರ ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಪುನರ್ವಸತಿ ಕಾರ್ಯ ಪ್ರಾರಂಭವಾಯಿತು. ಇದರಲ್ಲಿ ರಾಜ್‌ಕೋಟ್, ಪೋರ್‌ಬಂದರ್ ಮತ್ತು ಲಿಂಬ್ಡಿ ನಗರಗಳಲ್ಲಿ ಇರುವ ರಾಮಕೃಷ್ಣ ಮಿಷನ್ ಕೇಂದ್ರಗಳು ಪಾಲ್ಗೊಂಡವು. ಮಿಷನ್ನಿನ ಪ್ರಧಾನಕೇಂದ್ರವೂ ನೇರವಾಗಿ ಕೆಲವು ಪ್ರದೇಶಗಳಲ್ಲಿ ಕಾರ್ಯವನ್ನು ಪ್ರಾರಂಭಿಸಿತು. ೪೯೦ ಮನೆಗಳು, ೮೧ ಶಾಲಾ ಕಟ್ಟಡಗಳು, ೩ ಸಮುದಾಯ ಭವನಗಳು ಮತ್ತು ೩ ಪ್ರಾರ್ಥನಾಲಯ ಮುಂತಾದುವುಗಳನ್ನು ಕಟ್ಟಿಸುವುದು; ೧೯೦ ಕುಟುಂಬಗಳಿಗೆ ಕಟ್ಟಡ ಸಾಮಗ್ರಿಗಳನ್ನು ಒದಗಿಸುವುದು; ೭ ಕೊಳಗಳನ್ನು ತೋಡಿಸುವುದು – ಇವೇ ಮುಂತಾದವುಗಳು ಈ ಯೋಜನೆಯ ಅಂಗಗಳಾಗಿವೆ.

೨೦೦೩ ಮಾರ್ಚ್ ೨೨ರ ಒಳಗೆ ೬ ಗೃಹಕಾಲೋನಿಗಳನ್ನೂ (ಒಟ್ಟು ೪೯೦ ಮನೆಗಳು), ೮೧ ಶಾಲಾಕಟ್ಟಡಗಳನ್ನೂ ನಿರ್ಮಿಸಿ ಫಲಾನುಭವಿಗಳಿಗೆ ನೀಡಲಾಯಿತು. ಶಾಲೆಗಳು ಪೀಠೋಪಕರಣ, ಪುಸ್ತಕಬಂಢಾರ, ಆಟದ ಮೈದಾನ, ನೀರಿನ ವ್ಯವಸ್ಥೆ, ಶೌಚಾಲಯಗಳು– ಇವೇ ಮಂತಾದ ಸೌಲಭ್ಯಗಳನ್ನು ಒಳಗೊಂಡಿವೆ. ಅನೇಕ ಶಾಲೆಗಳಲ್ಲಿ ಗಿಡಗಳನ್ನೂ ನೆಡಲಾಗಿದೆ. ಒಟ್ಟು ಯೋಜನೆಯ ವೆಚ್ಚ ೩೦ ಕೋಟಿ ರೂಪಾಯಿಗಳು.

ಈ ಬೃಹತ್ ಯೋಜನೆಯು ಫಲಕಾರಿಯಾಗಲು ಅನೇಕರು ಉದಾರ ಹೃದಯದಿಂದ ಧನಸಹಾಯ ಮಾಡಿದ್ದಾರೆ ಮತ್ತು ಬಹು ಮಂದಿ ಸ್ವಯಂಸೇವಕರು, ಆಶ್ರಮದ ಭಕ್ತರು ಮತ್ತು ಸ್ಥಳೀಯರು ಈ ಕಾರ್ಯದಲ್ಲಿ ಶ್ರಮದಾನ ನೀಡಿದ್ದಾರೆ. ಅವರೆಲ್ಲರಿಗೂ ನಮ್ಮ ಧನ್ಯವಾದಗಳನ್ನು ಮಿಷನ್ನಿನ ಪ್ರಕಟನೆ ತಿಳಿಸುತ್ತದೆ.

ರಾಮಕೃಷ್ಣ ಮಿಷನ್ನಿನ ಕಾರ್ಯವೈಖರಿಯನ್ನು ಕಂಡು ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಮ್ ಹೀಗೆ ಉದ್ಗರಿಸಿದರು: "ಇದೊಂದು ಶ್ರೇಷ್ಠ ಮಿಷನ್, ಭಗವಂತನಿತ್ತ ಮಿಷನ್, ಇದು ಜನರ ದೇಹಮನಸ್ಸುಗಳ ನೋವನ್ನು ಪರಿಹರಿಸುತ್ತಿದೆ. ಭಗವಂತನ ಆಶೀರ್ವಾದ ನಿಮ್ಮೆಲ್ಲರ ಮೇಲೂ ಮಿಷನ್ನಿನ ಮೇಲೂ ಇರಲಿ." ಗುಜರಾತಿನ ಮಾನ್ಯ ಮುಖ್ಯಮಂತ್ರಿ ಶ್ರೀ ನರೇಂದ್ರ ಮೋದಿಯವರು ಒಂದು ಕಾಲೋನಿಯ ಉದ್ಘಾಟನೆಯ ಸಂದರ್ಭದಲ್ಲಿ ಹೇಳಿದರು : " ರಾಮಕೃಷ್ಣ ಮಿಷನ್ ಪೂಜಾ ಮನೋಭಾವದಿಂದ ಅನೇಕ ಜನಹಿತ ಕಾರ್ಯಗಳನ್ನು ನೆರವೇರಿಸುತ್ತ, ಸ್ವಾಮಿ ವಿವೇಕಾನಂದರ ದರಿದ್ರನಾರಾಯಣ ಸೇವೆಯ ಸಂದೇಶವನ್ನು ಕಾರ್ಯರೂಪಕ್ಕೆ ತರುತ್ತಿದೆ. ಸೇವೆಯನ್ನೇ ಶ್ರೇಷ್ಠ ಧರ್ಮವಾಗಿ ಮಾಡಿಕೊಂಡು ಅದರ ಮೂಲಕ ಭಗವಂತನನ್ನು ಆರಾಧಿಸಿದಾಗ ಎಂಥ ಅದ್ಭುತವನ್ನು ಸಾಧಿಸಬಹುದು ಎಂಬುದಕ್ಕೆ ಈ ಕಾಲೋನಿಯೇ ಸಾಕ್ಷಿಯಾಗಿದೆ "

## ರಾಮಕೃಷ್ಣ ಮಹಾಸಂಘದ ನೂತನ ಶಾಖೆ

ಬಿಹಾರ ರಾಜ್ಯದ ಮುಸಾಫರ್‌ಪುರದಲ್ಲಿರುವ ರಾಮಕೃಷ್ಣ ವಿವೇಕಾನಂದ ಸೇವಾಶ್ರಮವು ೨೭.೦೭.೨೦೦೩, ಸ್ವಾಮಿ ರಾಮಕೃಷ್ಣಾನಂದ ಜಯಂತಿಯ ದಿನದಂದು ರಾಮಕೃಷ್ಣ ಮಹಾಸಂಘದ ಅಧಿಕೃತ ಶಾಖೆಯಾಗಿ ಸ್ವೀಕರಿಸಲ್ಪಟ್ಟಿತು. ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆಯನ್ನೂ, ಸ್ವಾಮಿ ಅಭೇದಾನಂದರಿಂದ ಸಂನ್ಯಾಸದೀಕ್ಷೆಯನ್ನೂ ಪಡೆದಿದ್ದ ಸ್ವಾಮಿ ರೀತಾನಂದಜಿಯವರು ಈ ಕೇಂದ್ರವನ್ನು ೧೯೨೬ರಲ್ಲಿ ಪ್ರಾರಂಭಿಸಿದರು. ಅವರ ಶಿಷ್ಯರಾದ ಸ್ವಾಮಿ ಪ್ರಬುದ್ಧಾನಂದಜಿಯವರು ಅವರ ನಂತರ ಆ ಕೇಂದ್ರವನ್ನು ನಡೆಸಿಕೊಂಡು ಹೋಗುತ್ತಿದ್ದರು. ಕ್ಷಾಮಪರಿಹಾರವೇ ಮುಂತಾದ ಅನೇಕ ಸೇವಾಕಾರ್ಯಗಳ ಜೊತೆ ಒಂದು ಹೋಮಿಯೋಪತಿ ಮತ್ತು ಒಂದು ಕಣ್ಣಿನ ಆಸ್ಪತ್ರೆಗಳನ್ನೂ ಕೇಂದ್ರವು ನಡೆಸುತ್ತಿದೆ. ಒಂದು ಸುಂದರ ಶ್ರೀರಾಮಕೃಷ್ಣ ದೇವಾಲಯವನ್ನೂ ಕೇಂದ್ರವು ಹೊಂದಿದೆ.

ರಾಮಕೃಷ್ಣ ಮಹಾಸಂಘದ ಪ್ರಧಾನಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿಯವರು ೨೭.೦೭.೨೦೦೩ ರಂದು ಸರಳ ಸಮಾರಂಭದೊಂದಿಗೆ ಈ ಕೇಂದ್ರವನ್ನು ಸಂಘದ ಶಾಖೆಯಾಗಿ ಅಧಿಕೃತವಾಗಿ ಸ್ವೀಕರಿಸಿದರು. ಸಮಾರಂಭದಲ್ಲಿ ೨೯ ಜನ ಸಾಧುಗಳು ಭಾಗವಹಿಸಿದ್ದರು, ಮತ್ತು ಸುಮಾರು ೨೦೦೦ ಭಕ್ತರು ಪಾಲ್ಗೊಂಡಿದ್ದರು. ಬಿಹಾರ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಎನ್. ಬಿಸ್ವಾಸ್ ಅವರೂ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಾಧುಗಳಿಂದ ಉಪನ್ಯಾಸಗಳು, ಭಜನೆ ಪೂಜೆ ಹೋಮಾದಿಗಳು, " ರಾಮಕೃಷ್ಣಚರಿತಮಾನಸ" "ರಾಮಚರಿತಮಾನಸ" ಗೀತಪ್ರವಚನಗಳು – ಇವು ಸಮಾರಂಭದ ವಿಶೇಷ ಕಾರ್ಯಕ್ರಮಗಳಾಗಿದ್ದವು.

ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಲ್ಲಿ ಒಬ್ಬರಾದ ಸ್ವಾಮಿ ರಘುನಾಥಾನಂದಜಿಯವರು ಈಗ ಈ ಕೇಂದ್ರದ ಮುಖ್ಯಸ್ಥರು.